ಇಂದು ದಿನಾಂಕಃ 21.09.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಜಿ ಎಸ್ ಎಂ ವಕೀಲರಿಂದಃ

1. ದಾವಾ ಆಸ್ತಿಯ ಪೂರ್ವಕ್ಕೆ ಸಿದ್ದಯ್ಯ ಹಾಲಸ್ವಾಮಿ , ಪಶ್ಚಿಮಕ್ಕೆ ನಮ್ಮದೇ ಉಳಿದ ಜಮೀನು , ಆದರೆ ಅದರ ಸರ್ವೆ ನಂ. 120 ಆದರೆ ಪೋಡಿ ಸಂಖ್ಯೆ ಗೊತ್ತಿಲ್ಲ. ಉತ್ತರಕ್ಕೆ ಭರಮಪ್ಪ ತಂದೆ ಭರಮಪ್ಪದೊಡ್ಡಮನಿ, ಜಮೀನು, ದಕ್ಷಿಣಕ್ಕೆ ಈರನಗೌಡ ಚನ್ನಬಸಪ್ಪ ಮುದಿಗೌಡ್ರ ಇವರ ಜಮೀನು.ದಾವಾ ಜಮೀನಿನಲ್ಲಿ ಪ್ರಸ್ತುತ ಹತ್ತಿ ಬೆಳೆಯನ್ನು ಮಾಡಲಾಗಿದೆ.

2. ದಾವಾ ಆಸ್ತಿಯು ಸೋಮನಹಳ್ಳಿ ಗ್ರಾಮದ ಗಡಿಗೆ ಹೊಂದಿಕೊಂಡಂತೆ ಕಾಳಗೊಂಡ ಗ್ರಾಮದ ಜಮೀನು ಆಗಿರುತ್ತದೆ. ದಾವಾ ಆಸ್ತಿಯ ಚಕ್ಕಬಂಧಿಯಲ್ಲಿ ಹೇಳಿರುವ ವ್ಯಕ್ತಿಗಳು ಸೋಮನಹಳ್ಳಿ ಗ್ರಾಮದವರು ಅಲ್ಲ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣಕ್ಕೆ ನಿಂಗಪ್ಪ ಕಾಲ್ವಿಹಳ್ಳಿ ಮತ್ತು ಕಲ್ಲಪ್ಪ ಸೀತಿಕೊಂಡ ಇವರ ಜಮೀನುಗಳು ಬರುತ್ತವೆ ಎಂದರೆ ಸರಿಯಲ್ಲ. ಅಸಲು ದಾವಾ ನಂ. 121/2004 ರನ್ನು ನನ್ನ ತಂದೆಯವರು ಪ್ರತಿವಾದಿಗಳ ಮೇಲೆ ಹುಡಿದ್ದು ಅದರಲ್ಲಿ ಕಲ್ಲಪ್ಪ ಸೀತಿಕೊಂಡ ಇವರು ನನ್ನ ತಂದೆಯ ಪರವಾಗಿ ಸಾಕ್ಷಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಸಾಕ್ಷಿ ತಮ್ಮ ವಿಚಾರಣಾ ಸಂದರ್ಭದಲ್ಲಿ ತನ್ನ ಆಸ್ತಿಯ ಉತ್ತರಕ್ಕೆ ದಾವಾ ಆಸ್ತಿಯು ಬರುತ್ತದೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ.

3. ನಾನು ನನ್ನ ದಾವೆಯಲ್ಲಿ ನಮೂದು ಮಾಡಿರುವ ಚಕ್ಕಬಂದಿಗೂ ನನ್ನ ಪಾಟೀ ಸವಾಲಿನಲ್ಲಿ ಹೇಳಿದ ಚಕ್ಕಬಂದಿಗೆ ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ಕಬ್ಜಾದಲ್ಲಿ ಎಂದಿಗೂ ಇರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ದಾವಾ ಆಸ್ತಿಯ ಸರಿಯಾದ ಚಕ್ಕಬಂದಿಯನ್ನು ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ.

4. ಗೋವಿಂದಪ್ಪ ಎಂಬ ವ್ಯಕ್ತಿಯ ಕಳಗೊಂಡ ಗ್ರಾಮದಲ್ಲಿ ದೊಡ್ಡಮನೆ ಎಂಬುವ ಮನೆತನದ ಮೂಲ ಪುರುಷ ಎಂದರೆ ಸರಿಯಲ್ಲ. ಆತನಿಗೆ ದೊಡ್ಡರಂಗಪ್ಪ ಮತ್ತು ಸಣ್ಣ ರಂಗಪ್ಪ ಎಂಬುವ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಣ್ಣರಂಗಪ್ಪನಿಗೆ ತಿಮ್ಮಪ್ಪ ,ಗೋವಿಂದಪ್ಪ ಮತ್ತು ಗಿರಿಯಪ್ಪ ಎಂಬುವ ಮಕ್ಕಳುಗಳು ಎಂದರೆ ಸರಿಯಲ್ಲ.

ಸದರಿಯವರಲ್ಲಿ ನಿಂಗಪ್ಪನಿಗೆ ರಂಗಪ್ಪ ಮತ್ತು ಹನುಮಪ್ಪ ಎಂಬುವ ಮಕ್ಕಳುಗಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರಲ್ಲಿ ರಂಗಪ್ಪನಿಗೆ ನಿಂಗಪ್ಪ , ಕೆಂಚಪ್ಪ ಮತ್ತು ಗಿರಿಯಪ್ಪ ಎಂಬುವ 3 ಜನ ಮಕ್ಕಳುಗಳು ಎಂದರೆ ಸುಳ್ಳು. ಸದರಿ 3 ರವರಲ್ಲಿ ಗಿರಿಯಪ್ಪನಿಗೆ ಭರಮಪ್ಪ ಎಂಬುವ ಮಗ ಇದ್ದನು ಎಂದರೆ ಸುಳ್ಳು. ರಂಗಪ್ಪನ ಮೂವರು ಮಕ್ಕಳಲ್ಲಿ 2 ನೇ ಕೆಂಚಪ್ಪನಿಗೆ ಭರಮಪ್ಪ ಎಂಬುವ ಮಗನಿದ್ದನು ಎಂದರೆ ಸುಳ್ಳು. ಮತ್ತೆ ಸದರಿ ಭರಮಪ್ಪನಿಗೆ ನಿಂಗಪ್ಪ, ಚೌಡಪ್ಪ ಮತ್ತು ಭರಮಪ್ಪ ಎಂಬುವ 3 ಜನ ಮಕ್ಕಳಗಳು ಇದ್ದರು ಎಂದರೆ ಸುಳ್ಳು.

5. ಸದರಿ ಭರಮಪ್ಪನ 1 ನೇ ಮಗನಾದ ನಿಂಗಪ್ಪನಿಗೆ ಭರಮಪ್ಪ , ರಾಮಪ್ಪ ಮತ್ತು ಲಕ್ಷ್ಮಪ್ಪ ಹಾಗೂ ಪರಮೇಶಪ್ಪ ಇವರುಗಳು ಮಕ್ಕಳುಗಳು ಎಂದರೆ ಸರಿಯಲ್ಲ.

6. ರಂಗಪ್ಪನ 3 ಜನ ಮಕ್ಕಳುಗಳ ಪೈಕಿ 1 ನೇ ನಿಂಗಪ್ಪನಿಗೆ ಕೆಂಚಪ್ಪ ಎಂಬ ಮಗ ಇದ್ದನು ಎಂದರೆ ಸರಿ. ಸದರಿ ಕೆಂಚಪ್ಪನಿಗೆ ನಿಂಗಪ್ಪ ಮತ್ತು ರಂಗಪ್ಪ ಎಂಬುವ ಇಬ್ಬರೂ ಮಕ್ಕಳುಗಳು ಇದ್ದರು ಎಂದರೆ ಸರಿ. ಅವರಲ್ಲಿ ನಿಂಗಪ್ಪ ನನ್ನ ತಂದೆ ಎಂದರೆ ಸರಿ. ಭರಮಪ್ಪನ 3 ಜನ ಮಕ್ಕಳಲ್ಲಿ ಒಬ್ಬರಾದ ನಿಂಗಪ್ಪ ಇತನಿಗೆ ಪ್ರತಿವಾದಿ 1 ರಿಂದ 4 ರವರು ಮಕ್ಕಳುಗಳು ಎಂದರೆ ಸರಿಯಲ್ಲ. ನನ್ನ ಮುತ್ತಜ್ಜ ನಿಂಗಪ್ಪ ಮತ್ತು ಪ್ರತಿವಾದಿಯರ 1 ರಿಂದ 4 ರ ಮುತ್ತಜ್ಜ ಕೆಂಚಪ್ಪ ಇವರುಗಳು ಖಾಸ ಅಣ್ಣತಮ್ಮದಿರು ಎಂದರೆ ಸರಿಯಲ್ಲ. ಸದರಿ ಸಂಬಂಧಗಳ ವಿಚಾರಗಳು ನನ್ನ ತಂದೆ ಅಸಲು ದಾವಾ ನಂ.121/2004 ನ್ನು ಮಾಡುವಾಗ ತಿಳಿದಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಕೇಳಿರುವ ವಿಷಯಗಳು ಮತ್ತು ಪರಿಹಾರವು ಹಾಗು ಸದರಿ ಅಸಲು ದಾವಾ ನಂ. 121/2004 ರಲ್ಲಿ ಕೇಳಿರುವ ವಿಷಯಗಳು ಒಂದೇ ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

7. ಸದರಿ ಪ್ರಕರಣದಲ್ಲಿ ಇರುವ ವಾದ ಪತ್ರ ಪ್ರತಿವಾದ ಪತ್ರ ಹಾಗೂ ನ್ಯಾಯಾಲಯವು ಮಾಡಿದ ತೀರ್ಪು ಮತ್ತು ಡಿಕ್ರಿಯ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಈ ಕೇಸ್ 1 ರಿಂದ 4 ನೇ ಪ್ರತಿವಾದಿಗಳು ಅಸಲು ದಾವಾ ನಂ. 121/2004 ರಲ್ಲಿ ನನ್ನ ತಂದೆಯ ಮಾಲೀಕತ್ವನ್ನು ಅಲ್ಲಗಳೆದು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದಾರೆ ಎಂದರೆ ಸುಳ್ಳು ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ನಂ. 121/2004 ಮತ್ತು ಆರ್ ಎ ನಂ. 22/2013 ರಲ್ಲಿ ತೀರ್ಪು ಮತ್ತು ಡಿಕ್ರಿಗಳು ಈ

ದಾವೆಯಲ್ಲಿ ಇರುವ ದಾವಾ ಆಸ್ತಿಗೆ ಸಂಬಂದಪಟ್ಟಂತ ತೀರ್ಪು ಮತ್ತು ಡಿಕ್ರಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿಯರು ಹಾಗೂ ಈ ಪ್ರಸ್ತುತ ದಾವೆಯ ಪ್ರತಿವಾದಿಗಳು ಒಂದೇ ಇರುತ್ತಾರೆ ಎಂದರೆ ಸರಿಯಲ್ಲ. ಈಗಾಗಲೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆ ಜೀವಿತವಿದ್ದಾಗಲೇ ತೀರ್ಪು ಮತ್ತು ಡಿಕ್ರಿಗಳು ಆಗಿರುವುದರಿಂದ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ತಂದೆ ಸತ್ತ ನಂತರ ಮತ್ತೊಂದು ಈ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ದಾವಾ ಆಸ್ತಿಗೆ ಮಾಲೀಕನು ಅಲ್ಲ ಹಾಗೂ ಯಾವುದೇ ಹಿಸ್ಸೆದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-xxx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.